ಇ) ಸ್ವಾತಂತ್ರ್ಯಯೋಧರು ಚಿಕಿತ್ಸೆ ಪಡೆದ ಬಗ್ಗೆ ಪ್ರತ್ಯೇಕವಾಗಿ ಮಾಹಿತಿಯನ್ನು ಆಸ್ಪತ್ರೆಗಳಲ್ಲಿ ದಾಖಲಿಸಿರುವುದಿಲ್ಲವಾದ್ದರಿಂದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

ಈ) ಆಸ್ಪತ್ರೆಗಳಲ್ಲಿ ಲಭ್ಯವಿರುವ ಔಷಧಿ ಮತ್ತು ಸೇವೆಗಳನ್ನು ಉಚಿತವಾಗಿ ನೀಡಲಾಗಿರುತ್ತದೆ.

ಅಕ್ರಮ ಪ್ಯಾಕೇಜ್ಡ್ ನೀರಿನ ಘಟಕಗಳು

3844(4268); ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ)

ಅ) ರಾಜ್ಯದಲ್ಲಿರುವ ಒಟ್ಟು ಪ್ಯಾಕೇಜ್ಡ್ ನೀರಿನ ಘಟಕಗಳ ಸಂಖ್ಯೆ ಹಾಗೂ ಅದರಲ್ಲಿ ಅನುಮತಿ ಇಲ್ಲದೆ ಅಕ್ರಮವಾಗಿ ನೀರು ಸರಬರಾಜು ಮಾಡುವ ಘಟಕಗಳ ಸಂಖ್ಯೆ ಎಷ್ಟು; ಆರೋಗ್ಯ ಕಾಪಾಡುವ ನೀರನ್ನು ಅಕ್ರಮವಾಗಿ ಅಶುದ್ಧವಾಗಿ ಪ್ಯಾಕೇಜ್ ಘಟಕಗಳ ಮೂಲಕ ಮಾರುವವರ ಮೇಲೆ ಸರ್ಕಾರ ಕಾನೂನು ಕ್ರಮಕೈಗೊಳ್ಳುವುದೇ?

ಆ) ಐಎಸ್ಐ ಗುಣಮಟ್ಟದ ಪ್ಯಾಕೇಜ್ಡ್ ನೀರಿನ ಘಟಕವನ್ನು ಸ್ಥಾಪಿಸಲು ಇರಬೇಕಾದ ಮಾನದಂಡವೇನು ಹಾಗೂ ಮೂಲ ಸೌಲಭ್ಯಗಳೇನು; ಅನುಮತಿ ನೀಡುವಾಗ ಇರಬೇಕಾದ ಅರ್ಹತಾ ನೀತಿ ನಿಯಮಗಳೇನು?

ಇ) ಪ್ಯಾಕೇಜ್ಡ್ ನೀರು ಬಳಕೆದಾರರ ಸುರಕ್ಷತೆಗಾಗಿ ಸರ್ಕಾರದ ಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಒಟ್ಟು ಪ್ಯಾಕೇಜ್ಡ್ ನೀರಿನ ಘಟಕಗಳ ಸಂಖ್ಯೆ: 978 ಅವುಗಳಲ್ಲಿ ಅನುಮತಿ ಇಲ್ಲದೇ ನೀರು ಸರಬರಾಜು ಮಾಡುತ್ತಿದ್ದ ಘಟಕಗಳ ಸಂಖ್ಯೆ: 629 ಅಕ್ರಮವಾಗಿ ಅಶುದ್ಧವಾಗಿ ಪ್ಯಾಕೇಜ್ ಘಟಕಗಳ ಮೂಲಕ ಮಾರಾಟ ಮಾಡುವವರ ಮೇಲೆ ಸರ್ಕಾರ ಕಾನೂನು ಕ್ರಮ ತೆಗೆದುಕೊಳ್ಳುತ್ತಿದೆ.

ಆ) ಐಎಸ್‌ಐ ಗುಣಮಟ್ಟದ ಪ್ಯಾಕೇಜ್ಡ್ ನೀರಿನ ಘಟಕವನ್ನು ಸ್ಥಾಪಿಸಲು ಭಾರತ ಸರ್ಕಾರದ ಭಾರತೀಯ ಮೌಲ್ಯಮಾಪನ ಸಂಸ್ಥೆ ನಿಗದಿಪಡಿಸಿದ ನಿಯಮ ಮತ್ತು ನಿಬಂಧನೆಗಳ ಅನ್ವಯ ಮೂಲ ಸೌಲಭ್ಯಗಳು ಇರಬೇಕಾಗಿರುತ್ತದೆ.

ಅನುಮತಿ ನೀಡುವಾಗ ಸದರಿ ಸಂಸ್ಥೆಯ ನೀತಿ ನಿಯಮಗಳನ್ನು ಪಾಲಿಸಬೇಕಾಗುತ್ತದೆ.

ಇ) ಐಎಸ್‌ಐ ಪ್ರಮಾಣ ಪತ್ರ ಪಡೆದು ತಯಾರಿಸಿದ ಪ್ಯಾಕೇಜ್ಡ್ ನೀರನ್ನು ಮಾತ್ರ ಬಳಕೆದಾರರು ಉಪಯೋಗಿಸಬೇಕೆಂದು ಮಾಹಿತಿ, ಶಿಕ್ಷಣ, ಸಂಪರ್ಕಗಳ ಅಡಿಯಲ್ಲಿ ಹಾಗೂ ಮಾಧ್ಯಮಗಳ ಮುಖಾಂತರ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.

ಆಹಾರ ಸುರಕ್ಷತಾಧಿಕಾರಿಗಳು ಐಎಸ್‌ಐ ಪ್ರಮಾಣ ಪತ್ರ ಪಡೆಯದೇ ನೀರನ್ನು ತಯಾರಿಸಿ ಮಾರಾಟ ಮಾಡುವ ನೀರಿನ ಘಟಕಗಳನ್ನು ಮುಟ್ಟುಗೋಲು ಹಾಕಿಕೊಂಡು ಆರೋಪಿಗಳ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕ್ಕದ್ದಮೆಯನ್ನು ಹೂಡಲಾಗುತ್ತಿದೆ.

ಔಷಧಿ ಅಂಗಡಿಗಳಲ್ಲಿ ಮಾದಕವಸ್ತು–ದ್ರವ್ಯಗಳ ಮಾರಾಟ

3845(4300); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ಬೆಂಗಳೂರು ಮಹಾನಗರ ಸೇರಿದಂತೆ ಇರುವ ಕೆಲವು ಔಷಧಿ ಅಂಗಡಿಗಳಲ್ಲಿ ಮಾದಕ ವಸ್ತುಗಳು ಮತ್ತು ದ್ರವ್ಯಗಳು ಅಕ್ರಮವಾಗಿ ಮಾರಾಟವಾಗುತ್ತಿರುವುದು ಸರ್ಕಾರ ಪತ್ತೆ ಹೆಚ್ಚಿದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ; ಅವರುಗಳ ಮೇಲೆ ಕೈಗೊಂಡ ಕಾನೂನು ಕ್ರಮಗಳೇನು;

ಆ) ಔಷಧ ನಿಯಂತ್ರಣ ಇಲಾಖೆಯ ವ್ಯಾಪ್ತಿಗೆ ಬರುವ ಈ ಅಪಾಯಕಾರಿ ವ್ಯವಹಾರವನ್ನು ನಿಯಂತ್ರಿಸಲು ಮತ್ತು ಅಪಾದಿತರನ್ನು ಶಿಕ್ಷಿಸುವಲ್ಲಿ ಸರ್ಕಾರದ ಕ್ರಮಗಳೇನು;